ಅ) ಪರಿಶೀಲಸಲಾಗುವುದು.

ಬೆಂಗಳೂರು ನಗರದಲ್ಲಿ ೧೦-೦೦ ರೂ. ಗಳ ಸ್ಟಾಂಪ್ ಪೇಪರ್ ಸಿಗದೇ ಇರುವ ಬಗ್ಗೆ.

೧೩೧೧(೨೦೦೬)ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಈ) ಬೆಂಗಳೂರು ನಗರದಲ್ಲಿ ರೂ. ೧೦-೦೦ಗಳ ಸ್ಟಾಂಪ್ ಪೇಪರ್ ಸಿಗದೇ ಇರುವುದು ಸರ್ಕಾರಕ್ಕೆ ತಿಳಿದುಬಂದಿದೆಯಾ?

ಆ) ರೂ. ೧೦-೦೦ಗಳ ಸ್ಟಾಂಪ್ ಪೇಪರ್‌ನ್ನು ಕಾಳಸಂತೆಯಲ್ಲಿ (ಬ್ಲಾಕ್ ಮಾರ್ಕೆಟ್) ರೂ. ೧೪ ರಂತೆ ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ರೂ. ೧೦-೦೦ಗಳ ಸ್ಟಾಂಪ್ ಪೇಪರ್‌ಗಳನ್ನು ಸ್ಟಾಂಪ್ ವೆಂಡಾರ್ಸ್‌ಗೆ ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಇಲ್ಲಾ

ಆ) ಇಲ್ಲಾ

ಇ) ಕೊರತೆ ಇಲ್ಲಾ.

ಚಿತ್ರದುರ್ಗ ಜಿಲ್ಲೆಯಲ್ಲಿ ಬಗರ್‌ಹುಕುಂ ಸಾಗುವಳಿ ಕುರಿತು.

೧೩೧೩(೧೪೩೪)ಶ್ರೀ ಎನ್. ಜಿ. ನಾಯ್ಕ್ (ಮೊಳಕಾಲ್ಮೂರು):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಬಗರ್‌ಹುಕುಂ ಸಾಗುವಳಿದಾರರ ಸಂಖ್ಯೆ ಎಷ್ಟು?

ಆ) ಅವರು ಯಾವ ವರ್ಷದಿಂದ ಮಾಡುತ್ತಾ ಇದ್ದಾರೆ ಮತ್ತು ಆ ಭೂಮಿಯ ವಿಸ್ತೀರ್ಣವೆಷ್ಟು?

ಇ) ಈ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಹಾಗೂ ಅವರ ಸಾಗುವಳಿ ಭೂಮಿಯ ವಿಸ್ತೀರ್ಣವೆಷ್ಟು (ಪೂರ್ಣ ವಿವರಗಳನ್ನು ನೀಡುವುದು).

ಈ) ಬಗರ್ ಹುಕುಂನಿಂದ ಸಾಗುವಳಿ ಮಾಡುತ್ತಿರುವವರಿಗೆ ಖಾಯಂ ಮಾಡುವುದು ಸರ್ಕಾರದ ಗಮನದಲ್ಲಿದೆಯೇ? ಇಷ್ಟರಲ್ಲಿ ಖಾಯಂ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ೬೦೮೭೮

ಆ) ಅವರಲ್ಲಿ ಬಹಳಷ್ಟು ಜನ ೧೯೮೬-೪೪ನೇ ಸಾಲಿನಿಂದ ಸಾಗುವಳಿ ಮಾಡುತ್ತಿದ್ದಾರೆ. ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಒಟ್ಟು ವಿಸ್ತೀರ್ಣ ೧೭೪೦೨೧ ಎಕರೆ ೩೧ ಗುಂಟೆಗಳು.

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ೩೭೪೪೪ ಜನರು ಮತ್ತು ವಿಸ್ತೀರ್ಣ ೧೦೫೭೫೮ ಎಕರೆ ೧೧ ಗುಂಟೆಗಳು.

ಈ) ಬಗರ್‌ಹುಕುಂ ಸಾಗುವಳಿ ಸಕ್ರಮಗೊಳಿಸಲು ಅನುಕೂಲವಾಗುವಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ರ ಕಲಂ ೯೪ಕ್ಕೆ ಸೂಕ್ತ ತಿದ್ದುಪಡಿಯನ್ನು ತರಲಾಗಿದ್ದು, ಅದರಂತೆ ಸಕ್ರಮಗೊಳಿಸಲು ತಾಲ್ಲೂಕು ಮಟ್ಟದ ಸಮಿತಿಯು ಸಮ ಪ್ರಾಧಿಕಾರವುಳ್ಳದ್ದಾಗಿರುತ್ತದೆ. ಸಕ್ರಮಗೊಳಿಸುವ ಅರ್ಜಿಗಳು ತಾಲ್ಲೂಕು ಮಟ್ಟದ ಸಮಿತಿಗಳ ಮುಂದೆ ಇದ್ದು ಸದರಿ ಅರ್ಜಿಗಳನ್ನು ವಿಲೇವಾರಿ ಮಾಡಲು ಸಮಿತಿಯ ತೀರ್ಮಾನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಚಿತ್ರದುರ್ಗ ಜಿಲ್ಲೆಯಲ್ಲಿ ದರಖಾಸ್ತದಾರರ ಸಂಖ್ಯೆ.

೧೩೧೪(೧೪೩೫)ಶ್ರೀ ಎನ್. ಜಿ. ನಾಯ್ಕ್ (ಮೊಳಕಾಲ್ಮೂರು):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ದರಖಾಸ್ತುದಾರರ ಸಂಖ್ಯೆ ಎಷ್ಟು ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಮಂಜೂರಾಗಿದೆ?

ಆ) ಈ ಆಜ್ಞೆ ದರಖಾಸ್ತುದಾರರು ಹೊಂದಿರುವ ಆಜ್ಞೆ ಜಮೀನನ್ನು ಅವರಿಗೆ ಖಾಯಂ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ೧೦೪೬೪೨೬ ಅರ್ಜಿಗಳು, ಅವುಗಳಲ್ಲಿ ೬೪೪೭೮ ಅರ್ಜಿಗಳು ಚಿತ್ರದುರ್ಗ ಜಿಲ್ಲೆಯಿಂದ ಬಂದಿರುತ್ತವೆ. ಭೂ ಸಕ್ರಮೀಕರಣ ಯೋಜನೆಯಡಿಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಈಗಾಗಲೇ ೧೪೩ ಜನ ಅರ್ಜಿದಾರರಿಗೆ ಜಮೀನನ್ನು ಮಂಜೂರು ಮಾಡಲಾಗಿದೆ.

ಆ) ಪ್ರಸ್ತುತದಲ್ಲಿ ಅರ್ಜಿಗಳನ್ನು ತಾಲ್ಲೂಕು ಮಟ್ಟದಲ್ಲಿರುವ ಸಮಿತಿಗಳು ಪರಿಶೀಲಿಸುತ್ತಿವೆ. ಅರ್ಹ ಪ್ರಕರಣಗಳನ್ನು ಸಕ್ರಮಗೊಳಿಸಲು ಭೂ ಸಕ್ರಮೀಕರಣ ಯೋಜನೆಯಡಿಯಲ್ಲಿ ಸಮಿತಿಯು ಪರಿಶೀಲಿಸಿ ತೀರ್ಮಾನ ಕೈಗೊಳ್ಳುವುದು.

ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ರಸ್ತೆ ಹೆದ್ದಾರಿಗಳಲ್ಲಿ ಬೇವಿನ ಗಿಡ, ಹುಣಸೇಗಿಡ ಇತ್ಯಾದಿ ಬೆಳೆಸುವುದು.

೧೩೧೫(೧೯೧೭)ಶ್ರೀ ಎಂ. ಸಿ. ಕುನ್ನೂರ (ಶಿಗ್ಗಾಂವ್):- ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ರಾಷ್ಟ್ರೀಯ ಹೆದ್ದಾರಿಗಳ ಮತ್ತು ರಾಜ್ಯ ರಸ್ತೆಯ ಬದಿಯಲ್ಲಿ ನೀಲಗಿರಿ ಗಿಡ ಹಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ರಸ್ತೆಗಳ ಬದಿಯಲ್ಲಿ ಬೇವಿನ ಗಿಡ, ಹುಣಸೆ ಗಿಡ, ಮಾವಿನ ಗಿಡ, ನೀಲಗಿರಿ ಗಿಡ, ಇತ್ಯಾದಿ ಹಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ನೀಲಗಿರಿ ಗಿಡ ಹಚ್ಚುವುದರಿಂದ ಅಪಾಯವೆಂದು ಸಾರ್ವಜನಿಕರಿಂದ ದೂರು